# ಶತಕದ ಪುಲಕ



ಅರ್ಜುನ್ ತೆಂಡೂಲ್ಕರ್ ಡಿಸೆಂಬರ್ 14ರ ಬುಧವಾರ ರಣಜಿ ಕ್ರಿಕೆಟ್‌ನಲ್ಲಿ ರಾಜಸ್ತಾನದ ಎದುರು ಶತಕ ದಾಖಲಿಸಿದರು. ಈ ಟೂರ್ನಿಯಲ್ಲಿ ಆಡಿದ ಅವರ ವೃತ್ತಿಬದುಕಿನ ಮೊದಲ ಪಂದ್ಯದಲ್ಲಿಯೇ ದಾಖಲಾದ ಶತಕವಿದು. ಆ ಮಹತ್ತರ ರನ್ ಗಡಿ ದಾಟಿದ ಮೇಲೆ ಅವರು ಬ್ಯಾಟನ್ನು ಮೇಲಕ್ಕೆತ್ತಿ, ಅರೆ ಭಾಗ ಓರೆಯಾಗಿ ಮಾಡಿ, ಯಾವುದೋ ಸಂದೇಶವನ್ನು ರವಾನಿಸುವ ಉಪಾದಿಯಲ್ಲಿ ಮುಖವರಳಿಸಿ ನಿಂತರು.

ಸಚಿನ್ ರಮೇಶ್ ತೆಂಡೂಲ್ಕರ್ ತರಹದ ಶ್ರೇಷ್ಠ ಕ್ರಿಕೆಟಿಗನ ಮಗನಾಗಿದ್ದೂ ಅವರ ಕ್ರೀಡಾಪಥವು ಹೂವಿನ ಹಾಸಿನದ್ದಾಗಿರಲಿಲ್ಲ. ಸ್ವಜನ ಪಕ್ಷಪಾತ, ಶ್ರೇಷ್ಠರ ಮಕ್ಕಳಿಗೆ ಕ್ರಿಕೆಟ್‌ನಲ್ಲಿ ರತ್ನಗಂಬಳಿ ಹಾಸುವುದರ ಕುರಿತು ಇರುವ ಅಭಿಪ್ರಾಯಗಳಿಗೆಲ್ಲ ಅಪವಾದ ಎನ್ನುವಂತೆ ಅರ್ಜುನ್ ತೆಂಡೂಲ್ಕರ್ ವೃತ್ತಿಬದುಕು ಕಾಣಿಸುತ್ತಿದೆ.

ಸಚಿನ್ ತೆಂಡೂಲ್ಕರ್ ವಾಮನಮೂರ್ತಿ – ಐದೂವರೆ ಅಡಿ ಎತ್ತರವಷ್ಟೆ. ಅವರೂ ಮೂವತ್ತನಾಲ್ಕು ವರ್ಷಗಳ ಹಿಂದೆ ಆಡಿದ ಮೊದಲ ರಣಜಿ ಪಂದ್ಯದಲ್ಲೇ ಶತಕ ದಾಖಲಿಸಿ, ಸದ್ದು ಮಾಡಿದ್ದರು. ಆದರೆ, ತಮ್ಮದೇ ತವರಿನ ಮುಂಬೈ ತಂಡದ ಪರವಾಗಿ ಮಗ ಆಡುವಂತೆ ಮಾಡಲು ಅವರಿಗೂ ಸಾಧ್ಯವಾಗಲಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ನಲ್ಲಿ 'ಮುಂಬೈ ಇಂಡಿಯನ್ಸ್' ತಂಡಕ್ಕೆ ಕಳೆದ ಎರಡು ಋತುಗಳಲ್ಲಿ ಅರ್ಜುನ್ ಆಯ್ಕೆಯಾದರಾದರೂ, ಒಂದೇಒಂದು ಪಂದ್ಯ ಆಡುವ ಅವಕಾಶವೂ ಒಲಿಯಲಿಲ್ಲ.

ಅರ್ಜುನ್ ತಮ್ಮ ತಂದೆಗಿಂತ ಎಂಟು ಇಂಚು ಹೆಚ್ಚು ಎತ್ತರದ ಕ್ರಿಕೆಟಿಗ. ಎಡಗೈ ಮಧ್ಯಮ ವೇಗದ ಬೌಲರ್ ಆಗಬೇಕೆಂದೇ ಬೆವರು ಬಸಿದವರು. ಆಟಕ್ಕೆ ಕುದುರಿಕೊಳ್ಳುತ್ತಾ ಹೋದಂತೆ ಬ್ಯಾಟಿಂಗ್ ಕೂಡ ಮುಖ್ಯವೆನ್ನುವುದು ಗೊತ್ತಾಗತೊಡಗಿತು. ಕಳೆದ ಐಪಿಎಲ್ ಋತುವಿನಲ್ಲಿ 'ಮುಂಬೈ ಇಂಡಿಯನ್ಸ್' ಕಳಪೆ ಪ್ರದರ್ಶನ ನೀಡುತ್ತಿತ್ತು. ಆಗ ಈ ಹುಡುಗನಿಗೂ ಒಂದು ಅವಕಾಶ ಕೊಟ್ಟಿದ್ದರೆ ಆಯ್ಕೆದಾರರ ಗಂಟೇನು ಹೋಗುತ್ತಿತ್ತು ಎಂದು ಸಾಮಾಜಿಕ ಜಾಲತಾಣದಲ್ಲಿ ಅನೇಕರು ಟೀಕಾಪ್ರಹಾರ ಮಾಡಿದ್ದರು. 'ಮುಂಬೈ ಇಂಡಿಯನ್ಸ್'ನ ಬೌಲಿಂಗ್ ಕೋಚ್ ಶೇನ್ ಬಾಂಡ್ ಆ ಸಂದರ್ಭದಲ್ಲಿ ಒಂದು ಮಾತು ಹೇಳಿದ್ದರು – 'ಅರ್ಜುನ್ ಇನ್ನೂ ಪೂರ್ತಿ ಸಿದ್ಧವಾಗಿಲ್ಲ. ಚುಟುಕು ಕ್ರಿಕೆಟ್‌ನಲ್ಲಿ ಹಲವು ಆಯಾಮಗಳನ್ನು ಗಮನಿಸಿ, ಆಡುವ ಹನ್ನೊಂದು ಮಂದಿಯನ್ನು ಆಯ್ಕೆ ಮಾಡುತ್ತೇವೆ. ಅವನು ಬ್ಯಾಟಿಂಗ್‌ನಲ್ಲೂ ಪಳಗಬೇಕಿದೆ'.

ಬ್ಯಾಟ್ಸ್‌ಮನ್‌ಷಿಪ್‌ಗೆ ಹೆಸರಾದ ಮಹಾನಗರ ಮುಂಬೈ. ಅಲ್ಲಿ ಕ್ರಿಕೆಟ್‌ನಲ್ಲಿ ತುರುಸಿನ ಪೈಪೋಟಿ ಇದೆ. ಸುಮ್ಮನೆ ಬೆಂಚು ಕಾಯುವುದರಲ್ಲಿ ಅರ್ಥವಿಲ್ಲ ಎಂದೇ ಈ ವರ್ಷ ಅರ್ಜುನ್ ಗೋವಾ ತಂಡದ ಪರವಾಗಿ ರಣಜಿ ಕ್ರಿಕೆಟ್ ಆಡಲು ನಿರ್ಧರಿಸಿದರು. ಅದಕ್ಕೂ ಮೊದಲು ಅಲ್ಲಿನ ಅಭ್ಯಾಸ ಪಂದ್ಯಗಳಲ್ಲಿ ಚೆನ್ನಾಗಿ ಆಡಿದರಷ್ಟೇ ಆಯ್ಕೆ ಸಾಧ್ಯ ಎನ್ನುವ ಅರಿವೂ ಅವರಿಗೆ ಇತ್ತು. ಅದಕ್ಕೆಂದೇ ಮುಂಬೈ ಕ್ರಿಕೆಟ್ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರವನ್ನು ಕಳೆದ ಆಗಸ್ಟ್‌ನಲ್ಲಿ ಪಡೆದುಕೊಂಡರು.

ಹತ್ತೊಂಬತ್ತು ವರ್ಷದೊಳಗಿನವರ ತಂಡದಲ್ಲಿ ಮುಂಬೈ ಪರವಾಗಿ ಆಡುವ ಅವಕಾಶ ಅವರಿಗೆ 2018ರಲ್ಲೇ ಸಿಕ್ಕಿತ್ತು. 2020–21ರಲ್ಲಿ ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಕೂಡ ಹರಿಯಾಣ ಎದುರು ಆಡಿದರು. ಮೂರು ಓವರ್‌ಗಳಲ್ಲಿ 34 ರನ್ ನೀಡಿದ ಅವರಿಗೆ ಒಂದೇ ವಿಕೆಟ್ ಸಿಕ್ಕಿತ್ತು.

ಹಿಂದೊಮ್ಮೆ ಮನೋಬಲವನ್ನು ಹೆಚ್ಚುಮಾಡಿಕೊಳ್ಳಲೆಂದೇ ಅರ್ಜುನ್ ಪಂಜಾಬ್‌ಗೆ ಹೋಗಿದ್ದರು. ಯುವರಾಜ್ ಸಿಂಗ್ ತಂದೆ ಯೋಗರಾಜ್ ಅವರಿಂದ ಕೆಲವು ಸೂಕ್ಷ್ಮ ಪಾಠಗಳನ್ನು ಕಲಿತರು. ಯೋಗರಾಜ್ ಒಂದು ಕಾಲದಲ್ಲಿ ವೇಗದ ಬೌಲರ್ ಆಗಿದ್ದವರು. ಒಂದೇ ಒಂದು ಟೆಸ್ಟ್ ಪಂದ್ಯವನ್ನು ಆಡಲಷ್ಟೆ ಅವರಿಗೆ ಸಾಧ್ಯವಾಗಿತ್ತು. ಗಾಯದಿಂದಾಗಿ ಅವರು ಆಟ ತ್ಯಜಿಸಿ, ಪಂಜಾಬ್ ಸಿನಿಮಾಗಳಲ್ಲಿ ಅಭಿನಯಿಸಿದ್ದರು. ಅವರಿಗೆ ಆಗಲಾಗದ್ದನ್ನು ಮಗ ಯುವರಾಜ್ ಸಿಂಗ್ ಮೂಲಕ ಸಾಧ್ಯವಾಗಿಸಿಕೊಂಡ ಅಪರೂಪದ ವ್ಯಕ್ತಿ ಅವರು. ಹೀಗಾಗಿಯೇ ಅರ್ಜುನ್ ಅವರ ಬಳಿಗೆ ಹೋದದ್ದು.

ರಾಜಸ್ತಾನದ ಎದುರು ಆಡಿದ ಮೊದಲ ರಣಜಿ ಪಂದ್ಯದಲ್ಲಿಯೇ ಅರ್ಜುನ್ ಶತಕ ದಾಖಲಿಸಿದ್ದರಲ್ಲಿ ಗಮನಿಸಬೇಕಾದ ಸಂಗತಿಗಳಿವೆ. ಅವರು ಏಳನೇ ಬ್ಯಾಟ್ಸ್‌ಮನ್ ಆಗಿ ಕಣಕ್ಕೆ ಇಳಿದದ್ದು. ಅಷ್ಟು ಹೊತ್ತಿಗೆ ತಂಡದ ಮೊತ್ತ 200 ದಾಟಿತ್ತು. ಸುಯಶ್ ಪ್ರಭುದೇಸಾಯಿ ಅತ್ಯುತ್ತಮ ಲಯದಲ್ಲಿ ಆಡುತ್ತಿದ್ದರು. ಆದಾಗ್ಯೂ ಅರ್ಜುನ್ ತಾಳ್ಮೆಯನ್ನೇ ತೀಡಿಕೊಂಡು ಬಂದವರಂತೆ ನಿಂತರು. 207 ಎಸೆತಗಳ ಆಟದಲ್ಲಿ 16 ಬೌಂಡರಿ ಹಾಗೂ ಎರಡು ಸಿಕ್ಸರ್‌ಗಳು ಬಂದವು. ಸುಯಶ್ ಆ ಇನಿಂಗ್ಸ್‌ನಲ್ಲಿ ದ್ವಿಶತಕ ಗಳಿಸಲು ಅರ್ಜುನ್ ನೀಡಿದ ಸಾಥ್ ಕೂಡ ಕಾರಣವೆನಿಸಿಕೊಂಡಿತು. 120 ರನ್ ಗಳಿಸಿ, ಅರ್ಜುನ್ ಔಟಾದಾಗ ಅವರ ಮುಖದಲ್ಲಿ ಸಾರ್ಥಕ್ಯಭಾವ.

ಕಳೆದ ವರ್ಷ ಐಪಿಎಲ್‌ನಲ್ಲಿ ಅರ್ಜುನ್ ಒಂದೂ ಪಂದ್ಯಕ್ಕೆ ಆಡಲು ಆಯ್ಕೆಯಾಗದೇ ಇದ್ದಾಗ ವಾಹಿನಿಯೊಂದರ ಸಂದರ್ಶನದಲ್ಲಿ ಸಚಿನ್ ಅವರಿಗೆ ಪ್ರಶ್ನೆಯೊಂದು ಎದುರಾಗಿತ್ತು – 'ಮಗ ಆಯ್ಕೆಯಾಗದೇ ಹೋದಾಗ ನಿಮಗೆ ಏನನ್ನಿಸುತ್ತದೆ'. ಅದಕ್ಕೆ ಸಚಿನ್, 'ಆ ಟೂರ್ನಿ ಮುಗಿದಿದೆ. ನನಗೆ ಏನನ್ನಿಸಿತೆನ್ನುವುದು ಈಗ ಮುಖ್ಯವಲ್ಲ. ತಂಡದ ಮ್ಯಾನೇಜ್‌ಮೆಂಟ್ ಆ ಸಂದರ್ಭಕ್ಕೆ ತಕ್ಕಂತೆ ಆಯ್ಕೆ ಮಾಡಿರುತ್ತದೆ. ಎಲ್ಲ ಆಟಗಾರರಂತೆ ಅರ್ಜುನ್ ಕೂಡ ಕಷ್ಟಪಟ್ಟು ಅಭ್ಯಾಸ ಮಾಡಬೇಕಷ್ಟೆ' ಎಂದಿದ್ದರು.

■ ಎನ್ವಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65